ಬೆಂಗಳೂರು ನಗರದಲ್ಲಿ ಜವಳಿ ಪಾರ್ಕ್ ಸ್ಥಾಪನೆ

2036 (2458) : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಜನವಸತಿ ಪ್ರದೇಶದಲ್ಲಿನ ನೇಯ್ಗೆ ಮಗ್ಗಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ?

(ಆ) ಟೆಕ್ಸ್ ಪಾರ್ಕ್, ಅಪಾರಲ್ ಪಾರ್ಕ್ ಮಾದರಿಯಲ್ಲಿಯೇ ಜವಳಿ ಪಾರ್ಕ್‌ನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

(ಇ) ಈ ಜವಳಿ ಪಾರ್ಕ್‌ನಲ್ಲಿ ನೇಯ್ಗೆಗೆ ಬೇಕಾದ ಮೂಲಭೂತ ಸೌಲಭ್ಯಗಳು ನಿರಂತರ ವಿದ್ಯುತ್ ಸೌಲಭ್ಯ, ಕಚ್ಚಾಸಾಮಗ್ರಿಗಳು, ತಾಂತ್ರಿಕ ಸೇವೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ರಫ್ತು, ಸೌಲಭ್ಯಗಳು ಒಂದೇ ಸೂರಿನಡಿ ದೊರೆಯುವಂತೆ ಸರ್ಕಾರ ವ್ಯವಸ್ಥೆ ಮಾಡುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಇಲ್ಲ

(ಆ) ಜವಳಿ ಪಾರ್ಕ್ ಸ್ಥಾಪನೆ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಭಿಕ್ಷಾಟನೆ ಬಗ್ಗೆ

2038 (2460) : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಭಿಕ್ಷಾಟನೆ ಅತಿಯಾಗಿರುವುದು ನಿಜವಲ್ಲವೆ; ಹಾಗಿದ್ದಲ್ಲಿ ಯಾವ ಯಾವ ವರ್ಗದವರು ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ?

(ಆ) ಈ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳು ಯಾವುವು?

(ಇ) ಬೆಂಗಳೂರಿ ನಂತರ ಪ್ರಮುಖ ನಗರಗಳಲ್ಲಿ ಭಿಕ್ಷಾಟನೆಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕುಷ್ಟ ರೋಗಗಳ ಸಂಖ್ಯೆ ಎಷ್ಟು?

(ಈ) ರಾಜ್ಯದಲ್ಲಿ ನಕಲಿ ಕುಷ್ಟರೋಗ ಪ್ರಮಾಣಪತ್ರ ನೀಡಿ ಸರ್ಕಾರಿ ಸೇವೆಗೆ ಸೇರಿರುವವರ ಸಂಖ್ಯೆ ಎಷ್ಟು; ಇನ್ನು ಎಷ್ಟು ಜನ ನೈಜ ಕುಷ್ಟ ರೋಗಿಗಳನ್ನು ಸರ್ಕಾರ ಸೇವೆಯಲ್ಲಿ ನೇಮಕಾತಿ ಮಾಡಬೇಕಾಗಿರುತ್ತದೆ?

(ಉ) ಸರ್ಕಾರ ಈ ಕುಷ್ಠರೋಗಿಗಳ ಪುನರ್ವಸತಿಗೆ ಕೈಗೊಂಡಿರುವ ಕ್ರಮಗಳೇನು; ಸರ್ಕಾರದ ಸೌಲಭ್ಯಗಳು ಈ ಕುಷ್ಠ ರೋಗಿಗಳಿಗೆ ತಲುಪದಿರಲು ಕಾರಣವೇನು?

(ಊ) ಸರ್ಕಾರ ಈ ಕುಷ್ಠರೋಗಿಗಳಿಗೆ ಎಲ್ಲಿ ಮತ್ತು ಎಂದು ಪುನರ್ವಸತಿ ಕಲ್ಪಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ನಿಜ. ನಿರ್ಗತಿಕರು ಮತ್ತು ಬಡತನ ವರ್ಗಕ್ಕೆ ಸೇರಿದವರು ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ.

(ಆ) ರಾಜ್ಯದಲ್ಲಿ ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ 1975ರ ಕಾಯಿದೆಯನ್ನು ಸರ್ಕಾರವು ಈ ಹಿಂದೆ ಕೇವಲ 10 ನಗರ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸಿತ್ತು. ಇತ್ತೀಚೆಗೆ ಸದರಿ ಕಾಯಿದೆಯನ್ನು ಕರ್ನಾಟಕ ರಾಜ್ಯಾದ್ಯಾಂತ ದಿನಾಂಕ 28-8-97ರಿಂದ ವಿಸ್ತರಿಸಿರುವುದರಿಂದ ಪ್ರತಿ ಜಿಲ್ಲೆಯಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಆ ಪ್ರದೇಶಗಳಲ್ಲಿಯೂ ಸಹಾ ಭಿಕ್ಷುಕರು ತೊಂದರೆ ಕೊಡುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು.

(ಇ) ನಿಖರವಾಗಿ ಎಷ್ಟು ಮಂದಿ ಇದ್ದಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ.

(ಈ) 99 ಮಂದಿ. ಇವರುಗಳ ಬಗ್ಗೆ ಇಲಾಖಾ ವಿಚಾರಣೆ ನಡೆಯುತ್ತಿದೆ.

ಕುಷ್ಠ ರೋಗದಿಂದ ಮುಕ್ತರಾದವರ ಅರ್ಜಿ ಬಾಕಿ ಇರುವುದಿಲ್ಲ. ಇವರಿಗಾಗಿ ಕಾಯ್ದಿರಿಸುವ ಹುದ್ದೆಗಳು ಇರುವುದಿಲ್ಲ. ಕುಷ್ಠರೋಗಿಗಳನ್ನು ಸೇವೆಗೆ ತೆಗೆದುಕೊಳ್ಳುವ ಬಗ್ಗೆ ಯಾವುದೇ ನಿರ್ದಿಷ್ಟ ಗುರಿ ಇಟ್ಟುಕೊಂಡಿರುವುದಿಲ್ಲ.

1. ಕರ್ನಾಟಕ ರಾಜ್ಯದಲ್ಲಿ ಕುಷ್ಠರೋಗ ಪುನರ್ವಸತಿಗಾಗಿ ಗುಲ್ಬರ್ಗಾ ಹಾಗೂ ಕನಗಾಂವ್ ಜಿಲ್ಲೆ ಬೆಳಗಾವಿ ಇಲ್ಲಿ ಕುಷ್ಠರೋಗಿಗಳ ಪುನರ್ವಸತಿ ಮತ್ತು ಪದೋನ್ನತಿ ಘಟಕಗಳನ್ನು ಹಾಗೂ ಬೆಂಗಳೂರಿನಲ್ಲಿ 260 ಹಾಸಿಗೆಯುಳ್ಳ ಕುಷ್ಠರೋಗಿಗಳ ಆಸ್ಪತ್ರೆಯನ್ನು ಸ್ಥಾಪಿಸಲಾಗಿದೆ.

2. ರಾಜ್ಯದಲ್ಲಿ 5 ಸ್ವಯಂಸೇವಾ ಸಂಸ್ಥೆಗಳಿಗೆ ಕುಷ್ಠರೋಗ ಪುನರ್ವಸತಿ ಕೇಂದ್ರ ಸ್ಥಾಪಿಸಲು ಉತ್ತೇಜನ ನೀಡಿ ಸ್ಥಾಪಿಸಲಾಗಿದೆ.

3. ಕರ್ನಾಟಕ ಸರ್ಕಾರದಿಂದ 1997 ರವರೆಗೆ ಕುಷ್ಠರೋಗದಿಂದ ಗುಣಮುಖ ಹೊಂದಿದ ವ್ಯಕ್ತಿಗಳಿಗೆ ಗ್ರೂಪ್-ಡಿ ಹುದ್ದೆಗೆ ನೇರ ನೇಮಕಾತಿ ಮಾಡಲಾಗಿದೆ.

4. ಕರ್ನಾಟಕ ಸರ್ಕಾರದ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಕುಷ್ಠರೋಗದಿಂದ ಗುಣಮುಖ ಹೊಂದಿದ ಅಂಗವಿಕಲರಿಗೆ ಅಂಗವಿಕಲರ ಗುರುತಿನ ಚೀಟಿಯನ್ನು ನೀಡಲಾಗಿದೆ.

5. ನುರಿತ ಸಿಬ್ಬಂದಿ ಕೊರತೆಯಿಂದ ವೃತ್ತಿ ತರಬೇತಿಯನ್ನು ಕುಷ್ಠರೋಗ ಪುನರ್ವಸತಿ ಮತ್ತು ಪದೋನ್ನತಿ ಘಟಕಗಳಲ್ಲಿ ಪ್ರಾರಂಭ ಮಾಡಲಾಗಲಿಲ್ಲ.

(ಊ) ಸಧ್ಯ ಗುಲ್ಬರ್ಗಾ, ಹುಬ್ಬಳ್ಳಿ, ಬೆಳಗಾಂ, ಮಂಗಳೂರು, ಬೆಂಗಳೂರು ಇಲ್ಲಿ ಕುಷ್ಠ ರೋಗಿಗಳಿಗೆ ಪುನರ್ವಸತಿ ಸೌಲಭ್ಯ ನೀಡಲಾಗಿದೆ.

ದೊಡ್ಡಬಳ್ಳಾಪುರ ನಗರದಲ್ಲಿ ಒಳಚರಂಡಿ ಮತ್ತು ರಸ್ತೆ ರಿಪೇರಿ

2039 (2478) : ಶ್ರೀ ಕೃಷ್ಣಪ್ಪ ಎ. (ದೊಡ್ಡಬಳ್ಳಾಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಎಂದು ಕೈಗೆತ್ತಿಕೊಳ್ಳಲಾಗುವುದು; ಇದರ ಅಂದಾಜು ವೆಚ್ಚ ಎಷ್ಟು?

(ಆ) ದೊಡ್ಡಬಳ್ಳಾಪುರ ನಗರದ ರಸ್ತೆಗಳು ಸುಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಹಾಗಿದ್ದಲ್ಲಿ ದುರಸ್ತಿ ಕೆಲಸಕ್ಕಾಗಿ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು;

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ದೊಡ್ಡಬಳ್ಳಾಪುರ ನಗರದ ಒಳಚರಂಡಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ ಸಾಧ್ಯತೆ ಕುರಿತಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪರಿಶೀಲಿಸುತ್ತಿದೆ.

(ಆ) ಬಂದಿದೆ.

(ಇ) ರಾಜ್ಯದ ಬಹುತೇಕ ಎಲ್ಲಾ ನಗರಸಭೆಗಳಲ್ಲಿ ಜರೂರಾಗಿ ಅತ್ಯಗತ್ಯವಾದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಹುಡ್ಕೋ ಸಂಸ್ಥೆಯೊಂದಿಗೆ ರೂ.100 ಕೋಟಿಗಳ ನೆರವಿನ ಸಾಲದ ಒಡಬಂಡಿಕೆಯನ್ನು ಮಾಡಿಕೊಂಡಿದೆ. ತತ್ಸಂಬಂಧದಲ್ಲಿ ಸ್ವಲ್ಪ ಹಣವನ್ನು ದೊಡ್ಡ ಬಳ್ಳಾಪುರ ನಗರಸಭೆಗೂ ಬಿಡುಗಡೆ ಮಾಡಿ ಈ ಹಣದಲ್ಲಿ ಮುಖ್ಯ ರಸ್ತೆ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ದೊಡ್ಡಬಳ್ಳಾಪುರದಲ್ಲಿ ಬೆಳೆಯುವ ರೇಷ್ಮೆ

2040 (2479) : ಶ್ರೀ ಎ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರೇಷ್ಮೆಯನ್ನು ಬೆಳೆಯಲು ಹೆಚ್ಚಿನ ಅವಕಾಶ ಮತ್ತು ಹವಾಗುಣ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ರೇಷ್ಮೆ ಬೆಲೆಯನ್ನು ಇನ್ನೂ ಹೆಚ್ಚಿಗೆ ಬೆಳೆಯಲು ಸರ್ಕಾರ ಒದಗಿಸುವ ಸೌಲಭ್ಯಗಳೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಹೌದು